# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-8585/2015/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 26/9/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಕೆ.ರುದ್ರಮುನಿ ಬಿನ್ ಕಣುಮಪ್ಪ, ಕಣುಮಪ್ಪ ನಿಲಯ, ಅಗಳು ಏರಿಯಾ, 4ನೇ ಕ್ರಾಸ್, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಕೆ.ರುದ್ರಮುನಿ ಬಿನ್ ಕಣುಮಪ್ಪ, ಕಣುಮಪ್ಪ ನಿಲಯ, ಅಗಳು ಏರಿಯಾ, 4ನೇ ಕ್ರಾಸ್, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಎಸ್.ರಮೇಶ್, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, (2) ಶ್ರೀ.ಜಿ.ಹೆಚ್.ಗೋವಿಂದಪ್ಪ, ನಿವೃತ್ತ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮತ್ತು (3) ಶ್ರೀ.ಇ.ಎಂ.ಮಲ್ಲಿಕಾರ್ಜುನ, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ, ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ, ತೋಪುರ ಮಾಳಿಗೆ ಗ್ರಾಮದಲ್ಲಿ ದೂರುದಾರರ ತಾಯಿಯ ಹೆಸರಿಗೆ ರಿ.ಸ.ನಂ.164/9 ರಲ್ಲಿ 1 ಎಕರೆ 33 ಗುಂಟೆ ಜಮೀನಿದ್ದು, ದೂರುದಾರರಿಗೆ ಮತ್ತು ಅವರ ತಾಯಿಗೆ ಯಾವುದೇ ನೋಟೀಸು ನೀಡದೆ ಲೋಕೋಪಯೋಗಿ ಇಲಾಖೆಯವರು ಅಕ್ರಮವಾಗಿ ರಸ್ತೆಯನ್ನು ನಿರ್ಮಾಣ ಮಾಡಿರುತ್ತಾರೆ. ರಸ್ತೆ ನಿರ್ಮಾಣದ ಬಗ್ಗೆ ಭೂಸ್ವಾಧೀನ ಪಡಿಸಿಕೊಂಡಿರುವುದಿಲ್ಲ ಮತ್ತು ಪರಿಹಾರವನ್ನು ನೀಡಿರುವುದಿಲ್ಲವೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 2ನೇ ಎದುರುದಾರರು ಮೃತಪಟ್ಟಿದ್ದು, 3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

4. 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತನ್ನ ಆಕ್ಷೇಪಣೆಯಲ್ಲಿ ಸದರಿ ರಸ್ತೆಯು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಸೇರಿದ ರಸ್ತೆಯಾಗಿರುತ್ತದೆ. ರಸ್ತೆ ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯನ್ನು ಆ ಪ್ರದೇಶದ ಶಾಸಕರ ಶಿಫಾರಸ್ಸಿನೊಂದಿಗೆ ಮುಖ್ಯ ಇಂಜಿನಿಯರ್ ಮೂಲಕ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಯವರಿಗೆ ಸಲ್ಲಿಸಲಾಗುತ್ತದೆ. ಎಲ್ಲಾ ಪ್ರಕ್ರಿಯೆಗಳು ಮುಗಿದ ನಂತರ ಅಂದಾಜು ಪಟ್ಟಿ ಮಂಜೂರಾತಿ, ಟೆಂಡರ್ ಕರೆಯುವುದು, ಕಾಮಗಾರಿ ಅನುಷ್ಠಾನಗೊಳಿಸುವುದು ಇತ್ಯಾದಿ ನಡೆಯುತ್ತದೆ. ಆಪಾದನೆ ಮಾಡಲಾದ ರಸ್ತೆ ಕುಮಟಾ–ಕಡಮಡಗಿ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ–4 ಕ್ಕೆ ಕೂಡುವ ಅತಿ ಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಹಳ್ಳಿ ರಸ್ತೆಯಾಗಿದ್ದು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗಕ್ಕೆ ಸೇರಿದ್ದಾಗಿರುತ್ತದೆ. ಈ ರಸ್ತೆಯಲ್ಲಿ ನಬಾರ್ಡ್–13 ಯೋಜನೆಯಡಿಯಲ್ಲಿ ಕೇವಲ 6 ಕಿ.ಮೀ. ಅಭಿವೃದ್ಧಿ ಪಡಿಸಲಾಗಿದೆ. ಅವರು ಕರ್ತವ್ಯಕ್ಕೆ ಬರುವ ಮೊದಲೇ ಸದರಿ ರಸ್ತೆ ಅಭಿವೃದ್ಧಿಯು ಆರ್.ಐ.ಡಿ.ಎಫ್–13 ಯೋಜನೆಯಡಿಯಲ್ಲಿ ಸೇರ್ಪಡೆಯಾಗಿರುತ್ತದೆ. ಮೂಲ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಸಮಯದಲ್ಲಿ ಉಲ್ಲೇಖದಲ್ಲಿರುವ ಜಮೀನಿನಲ್ಲಿ ಒಂದು ತಿರುವು ಇದ್ದು, ತಿರುವಿನಲ್ಲಿ ಸ್ವಲ್ಪ ಹೆಚ್ಚಿನ ಅಗಲ ಮಾಡಿರಬಹುದು. ಆರ್.ಎಸ್.ಮ್ಯಾಪ್ ಪ್ರಕಾರ ಸದರಿ ರಸ್ತೆಯು ಒಂದು ಬಂಡಿ ಜಾಗವಾಗಿದ್ದು, ಅದರ ಅಗಲ ಕೇವಲ 8 ಅಡಿ ಇರುತ್ತದೆ. ಸದರಿ ರಸ್ತೆಯನ್ನು ಅಗಲ ಮಾಡಬೇಕಾದಾಗ ಹಿಂದಿನ ಕಾಲದಿಂದಲೂ ಪೂರ್ತಿ 20.3 ಕಿ.ಮೀ. ಉದ್ದಕ್ಕೂ ಮಾಡಿರುತ್ತಾರೆ. ಸದರಿ ಕಾಮಗಾರಿಯ ಒತ್ತುವರಿಯಾದ ಪ್ರದೇಶವನ್ನು ನಿಖರವಾಗಿ ತಿಳಿಸಲು ತಹಶೀಲ್ದಾರ್, ಚಿತ್ರದುರ್ಗ ಇವರಿಗೆ ಪತ್ರ ಬರೆಯಲಾಗಿತ್ತು. ತಹಶೀಲ್ದಾರ್, ಚಿತ್ರದುರ್ಗ ಇವರು ದಿ.19/3/11 ರಂದು ವಿಭಾಗ ಕಚೇರಿಯ ಅಧೀನ ಕಚೇರಿಯಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಪತ್ರ ಬರೆದು ಸದರಿ ಜಮೀನಿನಲ್ಲಿ 15 ಗುಂಟೆ ಜಾಗವು ರಸ್ತೆಗಾಗಿ ಒತ್ತುವರಿಯಾಗಿರುವುದಾಗಿ ತಿಳಿಸಿರುತ್ತಾರೆ. ನಂತರ ಅವರು ವರ್ಗಾವಣೆಗೊಂಡ ಕಾರಣ ಸದರಿ 15 ಗುಂಟೆ ಜಾಗದ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿರುವುದಿಲ್ಲ. ಸದರಿ ಜಾಗವನ್ನು ದೌರ್ಜನ್ಯದಿಂದ ಒತ್ತುವರಿ ಮಾಡಿರುವುದಿಲ್ಲ. ಸದರಿ ಒತ್ತುವರಿಯಾದ ಜಾಗವನ್ನು ಈಗಲೂ ಲೋಕೋಪಯೋಗಿ ಇಲಾಖೆ ವಿಭಾಗ ಅಥವಾ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಭೂಸ್ವಾಧೀನ ಪಡಿಸಿಕೊಳ್ಳಬಹುದಾಗಿರುತ್ತದೆ ಎಂದು ಹೇಳಿರುತ್ತಾರೆ.

5. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ದೂರಿನಲ್ಲಿ ಹೇಳಿರುವ ಅಂಶವನ್ನೇ ಪುನರುಚ್ಚರಿಸಿದ್ದು, ಮುಂದುವರೆದು 2008 ರಿಂದ 2016 ರವರೆಗೆ ಜಮೀನಿನಲ್ಲಿ ಉಳುಮೆ ಮಾಡಿರುವುದಿಲ್ಲ. ಒಂದು ವರ್ಷಕ್ಕೆ

ರೂ.40,000/- ದಂತೆ ಪರಿಹಾರ ನೀಡಬೇಕು. 15 ಗುಂಟೆ ಒತ್ತುವರಿ ಮಾಡಿ ರಸ್ತೆ ನಿರ್ಮಾಣ ಮಾಡಿದ್ದು, ಸದರಿ ಜಾಗವನ್ನು ದೌರ್ಜನ್ಯದಿಂದ ಒತ್ತುವರಿ ಮಾಡಿರುತ್ತಾರೆ. ಜಿಲ್ಲಾಧಿಕಾರಿಯವರನ್ನು ವಿಚಾರಿಸಿದಾಗ ಅದು ಭೂಸ್ವಾಧೀನ ಆಗಿರುವುದಿಲ್ಲ. ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಪರಿಹಾರವನ್ನು ಪಡೆಯಲು ತಿಳಿಸಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಆದ್ದರಿಂದ, ದೂರಿನ ಬಗ್ಗೆ ದಾಖಲಾತಿಗಳ ಸಮೇತ ಹಾಜರಾಗುವಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ ಜಿಲ್ಲೆ ಇವರಿಗೆ ಆದೇಶಿಸಲಾಗಿತ್ತು.

6. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರುದಾರರು ದೂರಿನಲ್ಲಿ ನಮೂದಿಸಿರುವ ರಸ್ತೆಯು ಕಾರ್ಯಪಾಲಕ ಇಂಜಿನಿಯರ್ ಕಚೇರಿ, ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗದ ವ್ಯಾಪ್ತಿಗೆ ಒಳಪಡುವ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ನೂರಾರು ವರ್ಷಗಳ ಹಿಂದಿನಿಂದಲೂ ಬಳಕೆಯಲ್ಲಿದ್ದು, ಮೊದಲಿಗೆ ಒಂದು ಬಂಡಿ ಜಾರು ಆಗಿದ್ದು, ಕೇವಲ 8 ಅಡಿ ಅಗಲವಿದ್ದು, ಈ ಹಿಂದೆ ಅಭಿವೃದ್ಧಿ ಪಡಿಸುವಾಗ ಅಕ್ಕಪಕ್ಕದ ಜಮೀನುದಾರರಾದ ಪೂರ್ವಿಕರ ಒಪ್ಪಿಗೆಯೊಂದಿಗೆ ಪೂರ್ಣ 20.3 ಕಿ.ಮೀ. ಉದ್ದಕ್ಕೂ ಜನರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಅಗಲಗೊಳಿಸಲಾಗಿರುತ್ತದೆ. ಸದರಿ ರಸ್ತೆಯು ಅಭಿವೃದ್ಧಿಗೊಳಿಸಲು ವಿಶೇಷಾಧಿಕಾರಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರು ದಿ.7/5/17 ರಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ಇವರಿಗೆ ಪತ್ರ ಬರೆದು ಸೂಚಿಸಿರುವುದರನ್ವಯ ಆರ್.ಐ.ಡಿ.ಎಫ್, ಪ್ರತಿ ಯೋಜನೆಯಡಿಯಲ್ಲಿ ಸೇರ್ಪಡೆಗೊಳಿಸಿ ಶಾಸಕರ ಶಿಫಾರಸ್ಸು ಪತ್ರ, ಅಂದಾಜು ಪತ್ರಿಕೆಯನ್ನು ಸಲ್ಲಿಸುವುದು ಇತ್ಯಾದಿ ಇಲಾಖೆ ಪ್ರಕ್ರಿಯೆಗಳನ್ನು ಮುಗಿಸಿ ಒಟ್ಟು ರಸ್ತೆ 20.3 ಕಿ.ಮೀ.ನಲ್ಲಿ ಕೇವಲ 6.00 ಕಿ.ಮೀ, ರಸ್ತೆಯನ್ನು ಮೂಲ ರಸ್ತೆ ಎಲ್ಲಿದೆಯೋ ಅದೇ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. ಕೆ.ರುದ್ರಮುನಿ ಬಿನ್ ಕಣುಮಪ್ಪ ಇವರು ದೂರಿರುವಂತೆ ರಸ್ತೆಯ ಕಾಮಗಾರಿ ಒತ್ತುವರಿಯಾದ ಪ್ರದೇಶವನ್ನು ನಿಖರವಾಗಿ ತಿಳಿಸಲು ತಹಶೀಲ್ದಾರ್, ಚಿತ್ರದುರ್ಗ ಇವರಿಗೆ ಪತ್ರದ ಮೂಲಕ ಕೋರಲಾಗಿತ್ತು. ದಿ.19/3/11 ರಂದು ತಹಶೀಲ್ದಾರ್‌ರವರು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದು 15 ಗುಂಟೆ ಜಾಗವು ಒತ್ತುವರಿಯಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಒತ್ತುವರಿಯಾಗಿರುವ ಜಮೀನು ಭೂಸ್ವಾಧೀನ ಪ್ರಕ್ರಿಯೆ ನಡೆಸುವ ಸಂಬಂಧ ಜಿಲ್ಲಾ

ಪಂಚಾಯತ್ ಇಂಜಿನಿಯರಿಂಗ್ ವಿಭಾಗವು ಅಧಿಕೃತ ಇಲಾಖೆಯಾಗಿರುತ್ತದೆಯೆಂದು ಹೇಳಿರುತ್ತಾರೆ.

7. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಇವರ ವರದಿ ದಿ.26/2/18 ನ್ನು ಪರಿಶೀಲಿಸಿದಾಗ, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ ಇವರು 2008-09ನೇ ಸಾಲಿಗೆ ಆರ್.ಐ.ಡಿ.ಎಫ್. ನಬಾರ್ಡ್-13 ಯೋಜನೆಯಡಿಯಲ್ಲಿ ರಾಜ್ಯ ಹೆದ್ದಾರಿ-48 ರಿಂದ ತೋಪುರ ಮಾಳಿಗೆ, ಎಣ್ಣೆಗೆರೆ, ಜೋಡಿಚಿಕ್ಕೇನಹಳ್ಳಿ, ಕಸವನಹಳ್ಳಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡಿರುತ್ತಾರೆ. ತದನಂತರ 2015-16ನೇ ಸಾಲಿಗೆ ಯೋಜನಾ ವಿಭಾಗ, ಚಿತ್ರದುರ್ಗ ಇವರ ವತಿಯಿಂದಲೂ ಸಹ ಸದರಿ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಂಡಿರುತ್ತಾರೆಂದು ಹೇಳಿರುವುದು ಕಂಡುಬರುತ್ತದೆ.

8. ತೋಪುರ ಮಾಳಿಗೆ ಗ್ರಾಮದ ಸ.ನಂ.164/9 ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯ ಪ್ರತಿಯನ್ನು ಪರಿಶೀಲಿಸಿದಾಗ, ಸದರಿ ಸರ್ವೆ ನಂಬರಿನಲ್ಲಿ 1.33 ಎಕರೆ ಜಮೀನು ದೂರುದಾರರಾದ ರುದ್ರಮುನಿ ಮತ್ತು ಇತರರ ಜಂಟಿ ಸ್ವಾಧೀನದಲ್ಲಿರುವುದು ಕಂಡುಬರುತ್ತಿದ್ದು, ಪವತಿ ಆಧಾರದ ಮೇರೆಗೆ ಸದರಿ ಸ್ವತ್ತು ದೂರುದಾರರು ಮತ್ತು ಇತರರ ಹೆಸರಿಗೆ ವರ್ಗಾವಣೆಯಾಗಿರುವುದು ಕಂಡುಬರುತ್ತದೆ. ದಿ.15/10/2009 ಮತ್ತು ದಿ.12/1/2010 ರಂದು ದೂರುದಾರರು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಕಚೇರಿ, ಚಿತ್ರದುರ್ಗ ಇವರಿಗೆ ಮನವಿಯನ್ನು ಸಲ್ಲಿಸಿ ರಿ.ಸ.ನಂ.164/9 ರ ಜಮೀನನ್ನು ಒತ್ತುವರಿ ಮಾಡಿ ರಸ್ತೆ ಮಾಡಿರುವ ಬಗ್ಗೆ ಸೂಕ್ತ ಪರಿಹಾರ ಒದಗಿಸಿಕೊಡುವಂತೆ ಕೋರಿರುವುದು ಕಂಡುಬರುತ್ತದೆ. ದಿ.1/6/2016 ರಂದು ಉಪ ವಿಭಾಗಾಧಿಕಾರಿ ಹಾಗೂ ಭೂ ಸ್ವಾಧೀನಾಧಿಕಾರಿ, ಚಿತ್ರದುರ್ಗ ಉಪ ವಿಭಾಗ, ಇವರು ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ ಇವರಿಗೆ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿದಾಗ, ತೋಪುರ ಮಾಳಿಗೆ ಗ್ರಾಮದ ಸ.ನಂ.164/9 ರಲ್ಲಿ 1.33 ಎಕರೆ ಜಮೀನು ಭೂಸ್ವಾಧೀನವಾಗಿರುವುದಿಲ್ಲವೆಂದು ವರದಿಯನ್ನು ನೀಡಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, ಭೂಸ್ವಾಧೀನ ಆಗದೆ ರಸ್ತೆಯನ್ನು ಅಭಿವೃದ್ಧಿ ಪಡಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಹಶೀಲ್ದಾರ್, ಚಿತ್ರದುರ್ಗ ಇವರಿಂದ ವರದಿಯನ್ನು ಪಡೆಯಲಾಗಿ, ಸದರಿ ಜಮೀನಿನಲ್ಲಿ 15 ಗುಂಟೆ ಜಾಗವು ರಸ್ತೆಗಾಗಿ ಒತ್ತುವರಿಯಾಗಿರುವುದಾಗಿ ತಿಳಿಸಿರುತ್ತಾರೆ. 1ನೇ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ದೂರುದಾರರಿಗೆ ಸಂಬಂಧಪಟ್ಟ ಜಮೀನು ರಸ್ತೆಗಾಗಿ

ಒತ್ತುವರಿಯಾಗಿರುವುದು ಕಂಡುಬರುತ್ತದೆ. ಸಾರ್ವಜನಿಕ ರಸ್ತೆಯನ್ನು ಮಾಡಿ ಸದರಿ ರಸ್ತೆಯ ಡಾಂಬರೀಕರಣ ಕಾಮಗಾರಿ ನಡೆಸಿರುವುದು ಕಂಡುಬರುತ್ತಿದ್ದು, ಒತ್ತುವರಿಯಾದ ಜಮೀನಿನ ಬಗ್ಗೆ ದೂರುದಾರರಿಗೆ ಸಂಬಂಧಪಟ್ಟ ಇಲಾಖೆಯವರು ಪರಿಹಾರವನ್ನು ನೀಡಬೇಕಾಗಿತ್ತು. ಆದರೆ, ಸದರಿ ಒತ್ತುವರಿಯಾದ ಜಮೀನಿನ ಬಗ್ಗೆ ಯಾವುದೇ ಪರಿಹಾರವನ್ನು ನೀಡಿರುವುದು ಕಂಡುಬರುತ್ತಿಲ್ಲ.

10. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತೋಪುರಮಾಳಿಗೆ ಗ್ರಾಮದ ಸ.ನಂ.164/9 ರಲ್ಲಿ ರಸ್ತೆಗಾಗಿ ಒತ್ತುವರಿಯಾಗಿದೆ ಎಂದು ಹೇಳಲಾಗಿರುವ ದೂರುದಾರರ ಸ್ವತ್ತಿಗೆ ಸಂಬಂಧಿಸಿದಂತೆ ಪರಿಹಾರ ನೀಡುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 27/9

(ನ್ಯಾಯಮೂರ್ತಿ ಎನ್.ಆನಂದ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.